೧೯೮೪–೮೫

೧ ಮೆ. ನೂತನ ಆಯುರ್ವೇದಿಕ್ ಕಾರ್ಯಾಲಯ, ಬಿಜಾಪುರ.
೨ ಮೆಂ. ಇಂಡಿಯನ್ ಫಾರ್ಮಸುಟಿಕಲ್ಸ್, ಉಡುಪಿ.
೩ ಮೆ. ಸಾಗರ್ ಫಾರ್ಮಸುಟಿಕಲ್ಸ್, ಬೆಂಗಳೂರು.
೪ ಮೆ. ನವಚೇತನ ಫಾರ್ಮಸುಟಿಕಲ್ಸ್, ಬೆಳಗಾವಿ.
೫ ಮೆ. ಚಾರಿಟೀಸ್ ಇಂಟರ್ ನ್ಯಾಷನಲ್, ಮೈಸೂರು.
೬ ಮೆ. ಕರ್ನಾಟಕ ಫಾರ್ಮಸುಟಿಕಲ್ಸ್, ಬೆಂಗಳೂರು.
೭ ಮೆ. ಮ್ಯಾಕ್ಸ್‌ವೆಲ್ ಫಾರ್ಮಸುಟಿಕಲ್ಸ್, ಬೆಂಗಳೂರು.
೮ ಮೆಂ. ಇಂಡೋಮೆಡ್ ಲ್ಯಾಬೋರೇಟರಿ, ಮೈಸೂರು.
೯ ಮೆ. ಬ್ರಹ್ಮಾಸ್ ಫಾರ್ಮಸುಟಿಕಲ್ಸ್, ಬೆಂಗಳೂರು.
೧೦ ಸರ್ಕಾರಿ ಕೇಂದ್ರೀಯ ಔಷಧಾಗಾರ, ಬೆಂಗಳೂರು.

೧೯೮೫–೮೬

೧ ಮೆ. ನವಚೇತನ ಫಾರ್ಮಸುಟಿಕಲ್ಸ್, ಬೆಳಗಾವಿ.
೨ ಮೆ. ಸಾಗರ್ ಫಾರ್ಮಸುಟಿಕಲ್ಸ್, ಬೆಂಗಳೂರು.
೩ ಮೆ. ಮ್ಯಾಕ್ಸ್‌ವೆಲ್ ಫಾರ್ಮಸುಟಿಕಲ್ಸ್, ಬೆಂಗಳೂರು.
೪ ಮೆಂ. ನೂತನ ಆಯುರ್ವೇದಿಕ್ ಕಾರ್ಯಾಲಯ, ಬಿಜಾಪುರ.
೫ ಮೆ. ಅಗ್ನಿವೇಶ ಫಾರ್ಮಸುಟಿಕಲ್ಸ್, ಬೆಂಗಳೂರು.
೬ ಮೆ. ಬ್ರಹ್ಮಾಸ್ ಫಾರ್ಮಸುಟಿಕಲ್ಸ್, ಬೆಂಗಳೂರು.
೭ ಸರ್ಕಾರಿ ಕೇಂದ್ರಿಯ ಔಷಧಾಗಾರ, ಬೆಂಗಳೂರು.

೧೯೮೬–೮೭

೧ ಮೆ. ಪ್ರಕಾಶ್ ಫಾರ್ಮಸುಟಿಕಲ್ಸ್, ಶಿವಮೊಗ್ಗ.
೨ ಮೆ. ನವಚೇತನ ಫಾರ್ಮಸುಟಿಕಲ್ಸ್, ಬೆಳಗಾವಿ.
೩ ಮೆ. ಸಾಗರ್ ಫಾರ್ಮಸುಟಿಕಲ್ಸ್, ಬೆಂಗಳೂರು.
೪ ಮೆ. ಅಗ್ನಿವೇಶ ಫಾರ್ಮಸುಟಿಕಲ್ಸ್, ಬೆಂಗಳೂರು.
೫ ಸರ್ಕಾರೀ ಕೇಂದ್ರಿಯ ಔಷಧಾಗಾರ, ಬೆಂಗಳೂರು.

ಸರ್ಕಾರಿ ಆಸ್ಪತ್ರೆಗಳಲ್ಲಿ ಸೌಲಭ್ಯಗಳ ಕೊರತೆ

೮೨. ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು).—ಮಾನ್ಯ ಆರೋಗ್ಯ ಮಂತ್ರಿ ಕುಟುಂಬ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯ ಸರ್ಕಾರದ ಆಸ್ಪತ್ರೆಗಳಲ್ಲಿ ಸೌಲಭ್ಯಗಳು ಕಡಿಮೆಯಿರುವ ಕಾರಣ ನರ್ಸಿಂಗ್ ಹೋಂಗಳು ಹೆಚ್ಚುತ್ತಿರುವುದು ನಿಜವೆ ?

ಆ) ಹಾಗಿದ್ದಲ್ಲಿ ಸರ್ಕಾರಿ ಆಸ್ಪತ್ರೆಗಳಲ್ಲಿ ಸೌಲಭ್ಯಗಳನ್ನು ಹೆಚ್ಚಿಸಲು ಕೈಗೊಂಡ ಕ್ರಮಗಳೇನು?

ಶ್ರೀ ಬಿ. ರಾಚಯ್ಯ (ಆರೋಗ್ಯ ಮಂತ್ರಿಗಳು).—

ಅ) ನರ್ಸಿಂಗ್ ಹೋಂಗಳು ಹೆಚ್ಚುತ್ತಿರುವುದು ನಿಜ. ಆದರೆ ಇದು ಆಸ್ಪತ್ರೆಗಳಲ್ಲಿ ಸೌಕರ್ಯ ಕಡಿಮೆಯಿರುವ ಕಾರಣದಿಂದಲ್ಲ.

ಆ) ಉದ್ಭವಿಸುವುದಿಲ್ಲ

ಬೆಳಗಾವಿಯಲ್ಲಿ ನಡೆದ ರೈಲು ದರೋಡೆ

*೮೨೬. ಮಲ್ಲಾರಿಗೌಡ ಎಸ್. ಪಾಟೀಲ್ (ಸಂಕೇಶ್ವರ)— ಮಾನ್ಯ ಗೃಹ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬೆಳಗಾವಿ ಜಿಲ್ಲೆಯಲ್ಲಿ ನಡೆದಿರುವ ರೈಲು ದರೋಡೆಯಲ್ಲಿ ಸೆರೆ ಹಿಡಿದಿರುವ ದರೋಡೆ ಕೋರರ ಹೆಸರೇನು ?

ಆ) ದರೋಡೆಕೋರರನ್ನು ಬಂಧಿಸಲು ರೈಲ್ವೆ ಪೋಲೀಸ್ ಹಾಗೂ ರಾಜ್ಯ ಪೋಲೀಸರ ಕಾರ್ಯಕ್ರಮದಲ್ಲಿ ವ್ಯತ್ಯಾಸ ಬಂದಿರುವುದು ನಿಜವೆ ?

ಇ) ದರೋಡೆ ನಡೆದಿರುವ ಹಿನ್ನೆಲೆಯನ್ನು ಸರ್ಕಾರವು ತನಿಖೆ ಮಾಡಲು ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿಕೊಂಡಿರುವುದು ನಿಜವೆ ?

ಈ) ಈ ದರೋಡೆಯಲ್ಲಿ ಸಿಕ್ಕಿರುವ ಆಭರಣಗಳು ಹಾಗೂ ಇನ್ನಿತರ ವಸ್ತುಗಳ ವಶಾಲ್ಮೆಷ್ಟು ಹಾಗೂ ಇವುಗಳನ್ನು ಯಾರ ಅಧೀನದಲ್ಲಿಡಲಾಗಿದೆ ?

ಶ್ರೀ ಆರ್. ಎಲ್. ಜಾಲಪ್ಪ (ಗೃಹ ಮಂತ್ರಿಗಳು)—

ಅ) ಈ ದರೋಡೆಯಲ್ಲಿ ಸೆರೆ ಹಿಡಿಯಲಾಗಿರುವವರ ಹೆಸರುಗಳು ಕೆಳಕಂಡಂತಿವೆ —

೧. ದುರುಗೇಶ್ ಬಿಜ್ವಾಡೆ
೨. ಬಸವರಾಜ್ ಕ್ಯಾರಕಟ್ಟಿ
೩. ಚಂದ್ರು ಅಲಿಯಾಸ್ ಚಕ್ಕಿಚಂದ್ರು
೪. ಅರ್ಜುನ್ ಖೋಡೆ
೫. ಮಂನ್ನಾ ಕಿಲಾನಿಯಾ
೬. ಮುತ್ತಪ್ಪ ಪಾಳ್ಕೋಟ್
೭. ಗೂಳಪ್ಪಗೌಡ ಪಾಟೀಲ್
೮. ಮಾರುತಿ ಕಂಕಣವಾಡಿ
೯. ರಾಮಜಿ ಸಮಗಾರ್
೧೦. ಅರ್ಜುನ್ ಹಾಲಪ್ಪ ನಾಯಕ್‌ವಾಡಿ
೧೧. ರಾಮಪ್ಪ ಹಾಲಪ್ಪ ನಾಯಕ್‌ವಾಡಿ
೧೨. ಮಾರುತಿ ಜಾಧವ
೧೩. ರಾಯಪ್ಪ ಹಿಡಕಲ್
೧೪. ಮಹಾದೇವ್ ಪರಪ್ಪ ಇಸಾಪತ್ನಾಯಕ್
೧೫. ಸೂರತ್‌ಖಾನ್
೧೬. ರತ್ನನ್
೧೭. ಬೀರಪ್ಪ ಅಲಿಯಾಸ್ ಬೀರಸಿದ್ದಪ್ಪ ರಾಯಪ್ಪ
೧೮. ರಾಮಪ್ಪ ಪಾತ್ರೋಟ್.

ಆ) ರೈಲ್ವೆ ಪೋಲೀಸ್ ಕರ್ನಾಟಕ ರಾಜ್ಯ ಪೋಲೀಸ್ ಪಡೆಯ ಅವಿಭಾಜ್ಯ ಅಂಗ. ಈ ಪ್ರಕರಣದ ತನಿಖೆಯ ವಿಷಯದಲ್ಲಿ ರಾಜ್ಯ ಪೋಲೀಸ್ ಪಡೆ ಮತ್ತು ರೈಲ್ವೆ ಪೋಲೀಸ್ ಘಟಕಗಳ ಮಧ್ಯೆ ಯಾವುದೇ ಭಿನ್ನಾಭಿಪ್ರಾಯ ಇರುವುದಿಲ್ಲ.